ಮಾಡಿಕೊಡುವಂತೆ ನನಗೆ ಹತ್ತಾರು ಜನ ನಿರ್ಮಾಪಕರು ಕೇಳಿಕೊಂಡರು. ಆದರೆ ನನಗದು ಇಷ್ಟವಿರಲಿಲ್ಲ. ಒಂದಕ್ಕಿಂತ ಇನ್ನೊಂದು ಭಿನ್ನ ಸಿನಿಮಾ ಮಾಡಬೇಕು ಎಂಬುದು ನನ್ನ ಆಸೆಯಾಗಿತ್ತು. ಹಾಗಾಗಿ 'ಮದಗಜ' ಕೈಗೆತ್ತಿಕೊಂಡೆ. ಈ ಕಥೆ ಬರೆಯುವಾಗ ನನ್ನ ಮನಸ್ಸಲ್ಲಿ ಶ್ರೀಮುರಳಿ ಇರಲಿಲ್ಲ. ಕಥೆ ಬರೆಯುವುದು ಒಂದು ರೀತಿಯಲ್ಲಿ ಷರ್ಟ್ ಹೊಲಿದ ಹಾಗೆ. ಅಂಗಿ ಹೊಲಿದು ಇಟ್ಟುಕೊಂಡಿರುತ್ತೇವೆ. ಕೊನೆಗೆ ಅದನ್ನು ಯಾರಿಗೆ ಹಾಕಬೇಕು ಎಂಬುದು ನಿರ್ಧಾರವಾದ ಮೇಲೆ ಫಿಟ್ಟಿಂಗ್ ಮಾಡುತ್ತೇವೆ. ಹಾಗೆಯೇ ಶ್ರೀಮುರಳಿ ಅವರ ಇಮೇಜ್‌ಗೆ ತಕ್ಕಹಾಗೆ ಈ ಕಥೆಯನ್ನು ಸ್ವಲ್ಪ ಫಿಟ್ಟಿಂಗ್ ಮಾಡಿದ್ದೇನೆ' ಎಂದು ಕಥೆಗಾರನ ಶೈಲಿಯಲ್ಲಿಯೇ ಹೇಳುತ್ತಾರೆ ಅವರು. ಈ ಸಮಯದಲ್ಲಿ ಪ್ರಶಾಂತ್ ನೀಲ್ ಅವರ ಸಹಕಾರವನ್ನೂ ಅವರು ನೆನಪಿಸಿಕೊಳ್ಳುತ್ತಾರೆ.

'ಇದು ಶ್ರೀಮುರಳಿ ಅವರ 22ನೇ ಸಿನಿಮಾ. ಅವರ ಅಭಿನಯದ ಹಿಂದಿನ 21 ಸಿನಿಮಾಗಳಿಗಿಂತಲೂ ಈ ಸಿನಿಮಾ ಭಿನ್ನವಾಗಿದೆ. ಡೈಲಾಗ್ ಡೆಲಿವರಿ, ಪಾತ್ರಪೋಷಣೆ, ಕಥೆಯ ರೂಪ ಎಲ್ಲವೂ ವಿಶಿಷ್ಟವಾಗಿದೆ. ಶ್ರೀಮುರಳಿ ಈ ಸಿನಿಮಾದಲ್ಲಿ ಹಲವು ಗಡಿರೇಖೆಗಳನ್ನು ದಾಟಿದ್ದಾರೆ' ಎನ್ನುವ ಮಹೇಶ್, 'ಟ್ರೈಲರ್ ನೋಡಿದರೆ ಈ ಸಿನಿಮಾದಲ್ಲಿ ಕ್ರೌರ್ಯವೇ ವಿಜೃಂಭಿಸಿದೆ ಅನಿಸಬಹುದು. ಆದರೆ ಸಿನಿಮಾದಲ್ಲಿ ಹಾಗಿಲ್ಲ. ಅಲ್ಲಿ ಪಾತ್ರಗಳ ಹೋರಾಟವಿದೆಯೇ ಹೊರತು ಕ್ರೌರ್ಯ ತುಂಬ ಕಡಿಮೆ ಇದೆ. ಜೊತೆಗೆ ಒಂದು ಕೋರ್ ಸೆಂಟಿಮೆಂಟ್ ಇದೆ. ಮನೆ ಮಂದಿಯೆಲ್ಲರೂ ಒಟ್ಟಿಗೇ ಕೂತು ನೋಡಿ ಆನಂದಿಸಬಹುದಾದ ಫ್ಯಾಮಿಲಿ ಎಂಟರ್‌ಟೈನರ್ ಸಿನಿಮಾ ನಮ್ಮದು. ಪ್ರೇಕ್ಷಕರಿಗೆ ಸಾಕಷ್ಟು ಅಚ್ಚರಿಗಳೂ ಇವೆ' ಎಂದು ಅವರು ಸಿನಿಮಾ ಸ್ವರೂಪದ ಬಗ್ಗೆ ಹೇಳುತ್ತಾರೆ.

ಜಗಪತಿ ಬಾಬು ನಟಿಸಿರುವುದು 'ಮದಗಜ'ದ ಇನ್ನೊಂದು ವಿಶೇಷ. ಅವರು ಸುಲಭಕ್ಕೇನೂ ನಟಿಸಲಿಕ್ಕೆ ಒಪ್ಪಿಕೊಂಡಿಲ್ಲ. ಐದು ಸಲ ಕಥೆ ಕೇಳಿದ್ದರಂತೆ. ಹಾಗೆಯೇ ಮಹೇಶ್ ಅವರ ಮೊದಲ ಸಿನಿಮಾ, 'ಅಯೋಗ್ಯ'ವನ್ನು ತರಿಸಿಕೊಂಡು ನೋಡಿದ್ದರಂತೆ. 'ಆದರೆ ಒಮ್ಮೆ ಒಪ್ಪಿಕೊಂಡ ಮೇಲೆ ಅವರು ಆ ಪಾತ್ರಕ್ಕೆ, ಅದರ ಸಿದ್ಧತೆಗೆ ತೋರಿಸಿದ ಬದ್ಧತೆಯನ್ನು ನೋಡಿ ಬೆರಗಾಗಿದ್ದೇನೆ. ಅವರ ಜೊತೆಗೆ ಕೆಲಸ ಮಾಡುತ್ತ ಸಾಕಷ್ಟು ಸಂಗತಿಗಳನ್ನು ಕಲಿತಿದ್ದೇನೆ' ಎನ್ನುತ್ತಾರೆ ಮಹೇಶ್. ಅವರ ಜೊತೆಗೆ ತಮಿಳಿನ ಹಿರಿಯ ನಟಿ ದೇವಯಾನಿ, ನಾಯಕಿ ಆಶಿಕಾ ರಂಗನಾಥ್, ರವಿ ಬಸ್ರೂರು ಅವರ ಕುರಿತೂ ಮೆಚ್ಚುಗೆಯ ಮಾತಾಡಲು ಮರೆಯುವುದಿಲ್ಲ. 'ಇವರೆಲ್ಲರಿಂದ ಕಲಿಯುತ್ತಲೇ ಈ ಸಿನಿಮಾ ಮಾಡಿದ್ದೇನೆ' ಎನ್ನುವುದು ಅವರ ವಿನಯದ ಮಾತು.

ಈ ಸಮಯದಲ್ಲಿ ಸಿನಿಮಾ ಬಿಡುಗಡೆ ಮಾಡುವುದು ರಿಸ್ಕ್ ಅನಿಸುವುದಿಲ್ಲವಾ ಎಂದು ಕೇಳಿದರೆ, 'ಹೌದು' ಎನ್ನುವ ಹಾಗೆ ತಲೆಯಾಡಿಸುತ್ತಾರೆ ಮಹೇಶ್.

'ಖಂಡಿತ ರಿಸ್ಕ್ ತೆಗೆದುಕೊಳ್ಳುತ್ತಿದ್ದೇವೆ. ಆದರೆ ಬೇರೆ ದಾರಿ ಇಲ್ಲ. ಜನವರಿ, ಫೆಬ್ರುವರಿ ಅಂತೆಲ್ಲ ಹೋದರೆ ಕೊರೊನಾ ಮೂರನೇ ಅಲೆಯ ಭಯ. ಒಮ್ಮೆ ಮೂರನೇ ಅಲೆ ಬಂದುಬಿಟ್ಟರೆ ಮತ್ತೊಂದು ವರ್ಷ ಹೋಗುತ್ತದೆ. ಹಾಗಾಗಿ ಈಗಲೇ ಬಿಡುಗಡೆ ಮಾಡಲು ನಿರ್ಧರಿಸಿದ್ದೇವೆ. ಇಲ್ಲಿ ನಮಗೆ ಮೂರು ನಾಲ್ಕು ವಾರ ಸಿಗುತ್ತದೆ. ಅಷ್ಟರಲ್ಲಿ ಜನರು ಮೆಚ್ಚಿ ಸಿನಿಮಾ ನೋಡಲು ಬರತೊಡಗಿದರೆ ಸಿನಿಮಾ ಗೆಲ್ಲುವುದು ಕಷ್ಟವಲ್ಲ' ಎಂದು ತಮ್ಮ ಲೆಕ್ಕಾಚಾರ ಹೇಳುವ ಮಹೇಶ್, ತಮ್ಮ ಹೆಸರಿನಲ್ಲಿ ಮತ್ತೊಂದು ಭರ್ಜರಿ ಗೆಲುವನ್ನು ಬರೆಯುವ ಉತ್ಸಾಹದಲ್ಲಿಯಂತೂ ಇದ್ದಾರೆ. ■

# ದಿಲ್ ಪಸಂದ್
## ರೊಮ್ಯಾಂಟಿಕ್ ಲುಕ್!

'ದಿಲ್ ಪಸಂದ್' ಹೆಸರು ಕೇಳಿದಾಕ್ಷಣ ನೆನಪಾಗುವುದು ಮನಸಲ್ಲ, ಬದಲಿಗೆ ಸಿಹಿ ಸಿಹಿಯಾದ ಒಂದು ಬಗೆಯ ತಿನಿಸು. ದಿಲ್ ಖುಷ್‌ಗೊಳಿಸುವ ಈ ಹೆಸರನ್ನೇ ಇಟ್ಟುಕೊಂಡು ಶಿವತೇಜಸ್ ಒಂದು ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಸದ್ಯ ಗಾಂಧಿನಗರದಲ್ಲಿ ಲವರ್‌ಬಾಯ್ ಇಮೇಜ್‌ನಿಂದ ಕಂಗೊಳಿಸುತ್ತಿರುವ ಡಾರ್ಲಿಂಗ್ ಕೃಷ್ಣ ಮತ್ತು ನಿಶ್ವಿಕಾ ನಾಯ್ಡು ನಾಯಕ–ನಾಯಕಿಯಾಗಿ ತೆರೆಹಂಚಿಕೊಳ್ಳುತ್ತಿರುವ 'ದಿಲ್ ಪಸಂದ್' ಸಿನಿಮಾದ ಫಸ್ಟ್ ಲುಕ್ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ. ಆ ಹೆಸರಿನ ತಿನಿಸಿನಲ್ಲಿನ ಸ್ವಾದವೇ ಕೃಷ್ಣ ಮತ್ತು ನಿಶ್ವಿಕಾ ನಡುವಿನಲ್ಲಿಯೂ ಇದೆ ಎನ್ನುವುದಕ್ಕೆ ಪುರಾವೆಯನ್ನುವಂತೆ ಫಸ್ಟ್ ಲುಕ್ ಇದೆ. ಹದಿಹರೆಯದ ಹಸಿಬಿಸಿ ಪ್ರೇಮಕಥೆಯೇ ಈ ಚಿತ್ರದ ಹೂರಣ ಎಂಬುದನ್ನು ಫಸ್ಟ್‌ಲುಕ್‌ನಲ್ಲಿನ ನಾಯಕ–ನಾಯಕಿಯ ಭಾವ ಭಂಗಿಯೇ ಸಾರುತ್ತಿವೆ.

ರಶ್ಮಿ ಫಿಲಂಸ್ ಲಾಂಛನದಲ್ಲಿ ಈ ಚಿತ್ರಕ್ಕೆ ಸುಮಂತ್ ಕ್ರಾಂತಿ ಹಣ ಹೂಡುತ್ತಿದ್ದಾರೆ. ಸಾಧುಕೋಕಿಲ, ರಂಗಾಯಣ ರಘು, ತಬಲಾ ನಾಣಿ ಅವರ ತ್ರಿಕೋನಸ್ಪರ್ಧೆ ಪ್ರೇಮದ ಜೊತೆ ನಗೆಯ ಹೊನಲನ್ನೂ ಹರಿಸುವ ಭರವಸೆ ಹುಟ್ಟಿಸಿವೆ. ಅರುಣ ಬಾಲರಾಜ್ ಕೂಡ ಒಂದು ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಈಗಾಗಲೇ ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಗಿದ್ದು, ಡಿಸೆಂಬರ್ ಮೊದಲ ವಾರದಲ್ಲಿ ದ್ವಿತೀಯ ಹಂತದ ಚಿತ್ರೀಕರಣ ಆರಂಭಿಸಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ. ಅರ್ಜುನ್ ಜನ್ಯ ಸಂಗೀತ, ಶೇಖರ್‌ಚಂದ್ರ ಛಾಯಾಗ್ರಹಣ 'ದಿಲ್ ಪಸಂದ್' ಚಿತ್ರಕ್ಕಿದೆ. ■

